1) ಪ್ಲೊರೋಸಿಸ್ ರೋಗ ಇರುವ ಗ್ರಾಮಗಳನ್ನು ಸಮೀಕ್ಷೆ ಮಾಡಿ ಗುರ್ತಿಸಲಾಗಿ ಮುಂದಿನ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2) ಕುಡಿಯುವ ನೀರಿನ ಜಲಮೂಲಗಳನ್ನು ಸಂಗ್ರಹಿಸಿ ರಸಾಯನಿಕ ಪರೀಕ್ಷೆಗೆ ಒಳಪಡಿಸಿ ನಂತರ ನೀರನ್ನು ಡಿಫ್ಲೋರೈಡ್ ಮಾಡಲು ಕ್ರಮಕೈಗೊಳ್ಳಲಾಗಿದೆ.

3) ವೈದ್ಯರು,ವೈದ್ಯೇತರರಿಗೆ ಜನಾರೋಗ್ಯ ಇಲಾಖೆಯ ಇಂಜನೀಯರ್‌ಗಳಿಗೆ ಸ್ವಯಂ ಸೇವಾ ಸಂಸ್ಥೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ರೋಗಪೀಡಿತ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮ ನಡೆಸಲಾಗುತ್ತದೆ.

4) ಈ ರೋಗಕ್ಕೆ ಚಿಕಿತ್ಸೆ ಇಲ್ಲದ ಕಾರಣ ಪ್ಲೊರೋಸಿಸ್ ರೋಗಕ್ಕೆ ತುತ್ತಾದವರಿಗೆ ಅಧಿಕಾಂಶ ಫ್ಲೋರೈಡ್ ರಸಾಯನಿಕದಿಂದರುವ ನೀರನ್ನು ಕುಡಿಯದಂತೆ ತಿಳುವಳಿಕೆ ನೀಡಲಾಗುತ್ತಿದೆ.

ಮುಂದಾಗಬಹುದಾದ ತೊಂದರೆಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ ಹಾಗೂ ಸುರಕ್ಷಿತ ನೀರನ್ನೇ ಬಳಸುವ ಪ್ರಾಮುಖ್ಯತೆಯನ್ನು ಜನರಿಗೆ ತಿಳುವಳಿಕೆ ನೀಡಲಾಗುತ್ತಿದೆ.

5) ಶಾಲಾ ಮಕ್ಕಳಿಗೆ ಕಾಲಕಾಲಕ್ಕೆ ದಂತ ಪರೀಕ್ಷೆ ಮಾಡಿ ದಂತ ರಕ್ಷಣ ಮತ್ತು ದಂತ ಆರೋಗ್ಯ ಹುಳುಕಲ್ಲು ಮುಂತಾದ ತೊಂದರೆಗಳ ಬಗ್ಗೆ ತಿಳುವಳಿಕೆ ನೀಡಿ ಸುರಕ್ಷಿತವಾದ ನೀರನ್ನೇ ಬಳಸುವಂತೆ ಅರಿವು ಉಂಟು ಮಾಡಲಾಗುತ್ತಿದೆ;

6) ಸಮತೋಲನ ಆಹಾರ ಸೇವನೆ ಹೆಚ್ಚಾಗಿ " ಸಿ" ಅನ್ನಾಂಗ ಮತ್ತು ಕ್ಯಾಲ್ಸಿಯಂ ಸೇವನೆಯ ಬಳಕೆ ಮತ್ತು ಇದರ ಪ್ರಾಮುಖ್ಯತೆಯ ಬಗ್ಗೆ ತಿಳಿಸಲಾಗುತ್ತಿದೆ.

7) ಗ್ರಾಮೀಣ ಜನತೆಗೆ ಆರೋಗ್ಯ ಶಿಕ್ಷಣದ ಮುಖಾಂತರ ಸುಲಭ ರೀತಿಯಲ್ಲಿ ಅರ್ಥವಾಗುವಂತೆ ಕರಪತ್ರ, ಮಡಿಕೆಪತ್ರ, ಭಿತ್ತಿಪತ್ರ ಮತ್ತು ಸಿನಿಮಾಸ್ಲೈಡ್‌ಯಿಂದ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ವಿಷಯ : ಶಿವಮೊಗ್ಗ ಮಹಿಳಾ ವಸತಿ ಪಾಲಿಟೆಕ್ನಿಕ್‌ನ ಕಟ್ಟಡ ಕಾಮಗಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 185 (714)

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಶಿವಮೊಗ್ಗದಲ್ಲಿ ನಿರ್ಮಿಸಲಿರುವ ಮಹಿಳಾ ವಸತಿ ಪಾಲಿಟೆಕ್ನಿಕ್‌ನ ನಿರ್ಮಾಣ ಈಗ ಯಾವ ಹಂತದಲ್ಲಿದೆ?

ಆ) ಇದಕ್ಕಾಗಿ ಸರ್ಕಾರ ಎಷ್ಟು ಜಮೀನನ್ನು ತೆಗೆದುಕೊಂಡಿದೆ?

ಇ) ಸದರಿ ಕಾಮಗಾರಿಯು ಯಾವಾಗ ಪ್ರಾರಂಭವಾಗುವುದು ಮತ್ತು ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :-

ಅ)ಭಾರತೀಯ ರೈಲ್ವೆ ತಾಂತ್ರಿಕ ಮತ್ತು ಆರ್ಥಿಕ ಸ್ವಾಯತ್ತ (ರೈಟ್ಸ್) ಸಂಸ್ಥೆಯವರು ಈ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸುತ್ತಿದ್ದಾರೆ.

ಆ)14 ಎಕರೆ 22 ಗುಂಟೆ.

ಇ) ಈ ಕಟ್ಟಡದ ಕಾಮಗಾರಿಯು ಡಿಸೆಂಬರ್ 94ರಲ್ಲಿ ಪ್ರಾರಂಭವಾಗುವುದೆಂದು ಮತ್ತು ಜೂನ್ 96ರ ಒಳಗಾಗಿ ಪೂರ್ಣಗೊಳಿಸಲಾಗುವುದೆಂದು ನಿರೀಕ್ಷಿಸಿದೆ.

ವಿಷಯ : ಬೆಳಗಾಂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ ಹಾಗು ಉರ್ದು ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 187 (696)

ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿರುವ ಮರಾಠಿ ಮತ್ತು ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳೇಷ್ಟು?

ಆ) ಅವುಗಳನ್ನು ಯಾವಾಗ ತುಂಬಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ)ಪ್ರಸ್ತುತ ಮರಾಠಿ ಮತ್ತು ಉರ್ದು ಶಿಕ್ಷಕರ ಹುದ್ದೆಯು ಬೆಳಗಾಂ ತಾಲ್ಲೂಕಿನಲ್ಲಿ ಖಾಲಿ ಇರುವುದಿಲ್ಲ.

ಆ)ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ರಾಜ್ಯದಲ್ಲಿರುವ ಸ್ನಾತಕೋತ್ತರ ಪದವಿಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 189 (775)

ಶ್ರೀ ಪಿ.ಜಿ. ಆರ್ ಸಿಂಧ್ಯ (ಕನಕಪುರ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ದೊರಕುವ ಸ್ನಾತಕೋತ್ತರ ಪದವಿಗಳ ಒಟ್ಟು ಸಂಖ್ಯೆ ಎಷ್ಟು?